## ಕವಿತೆ




ಇಂಗ್ಲಿಷ್ ಮೂಲ: **ಸಾನೆಟ್ ಮಾಂಡಲ್**
ಕನ್ನಡಕ್ಕೆ: **ಕಮಲಾಕರ ಕಡವೆ**
ಕಲೆ: ರೂಪಶ್ರೀ ಕಲ್ಲಿಗನೂರು



# ಹಸಿವಿನ ಭರವಸೆ

'ಸುಂದರಬನ'ದ ಓರ್ವ ಮೀನುಗಾರ
ಮತ್ತೇರಿದ ನದಿಯೊಳಗೆ ಎಳೆಯುತ್ತಿದ್ದಾನೆ
ಮಣ್ಣಲ್ಲಿ ಹುಗಿದು ನಿಂತಿರುವ ತನ್ನ ದೋಣಿಯನ್ನು.

ಅವನ ಪ್ರಯಾಸದ ಸದ್ದುಗಳನ್ನು ಅಡಗಿಸಿದೆ
ದೋಣಿಮೂತಿ ಮತ್ತವನ ಕೈಗಳ ನಡುವಿರುವ
ಬೆವರಿಂದ ಒದ್ದೆಯಾದ ಮುಂಡಾಸ.

ಅವನ ಬಲೆಯ ತೂತುಗಳಿಗಿಂತ ಹೆಚ್ಚು
ದೃಢ ಸಂಕಲ್ಪದ ಅವನ ಉಬ್ಬಿದ ಧಮನಿಗಳು
ಹೀರುತ್ತಿವೆ ಸೂರ್ಯಕಿರಣಗಳನ್ನು.

ಕಾಡಿನ ಬಾಗಿದ ಮರಗಳು
ನೆರವಾಗಲು ಕೈ ಒಡ್ಡಿವೆ,
ಆದರೆ, ನದಿದಂಡೆಯ ನಿಗ್ರಹಕ್ಕೊಳಗಾಗಿ
ಗಾಳಿಯಲ್ಲಿ ಗೋಳಿಟ್ಟಿವೆ.

ಬೆಚ್ಚಗಿದ್ದರೂ ನದಿಯ ನೀರು
ದೋಣಿಯನೆತ್ತುವಷ್ಟು ಆಳವಿಲ್ಲ.

ಒಡಕು ಸೂರ್ಯನಲ್ಲಿ ಎಲ್ಲೋ
ಹಸಿವು ಕೆಸರುಕೆಸರು ಶ್ರಮವನ್ನು ಸವಿಯುತ್ತಿತ್ತು.